# ‘ಆಟೊ ಅನ್ನ ಕೊಟ್ಟಿದೆ ಹಾವು ಹೆಸರು ಕೊಟ್ಟಿದೆ



## ಸ್ನೇಕ್ ಶ್ಯಾಮ್

‘ಬಿಗ್‌ಬಾಸ್–10’ ಸ್ಪರ್ಧಿ

◆ **‘ಬಿಗ್‌ಬಾಸ್’ ಮನೆಯ ಒಂದು ವಾರದ ಜೀವನ ಹೇಗಿತ್ತು?**

ತುಂಬ ಒಳ್ಳೆಯ ವೇದಿಕೆ ಅದು. ಲಕ್ಷಾಂತರ ಮಂದಿ ಹೋಗಬೇಕು ಎಂದು ತಹತಹಿಸುತ್ತಾರೆ. ನನಗೆ ಅದೃಷ್ಟ ಇದ್ದಿದ್ದರಿಂದ ಅದು ಸಿಕ್ಕಿದೆ. ತುಂಬ ಜೋಶ್‌ನಲ್ಲೇ ಹೋಗಿದ್ದೆ. ನನ್ನ ಆರೋಗ್ಯ ಕೈಕೊಟ್ಟಿದ್ದರಿಂದ ಒಂದೇ ವಾರಕ್ಕೆ ಹಿಂದಿರುಗುವಂತೆ ಆಯ್ತು. ವರ್ಟಿಗೊ (ಕಿವಿಬೇನೆ, ಒಳಕಿವಿಯಲ್ಲಿರುವ ದ್ರಾವಣ ಕಡಿಮೆ ಆಗುವುದು) ಸಮಸ್ಯೆ ಉಂಟಾಯಿತು. ಮೊದಲ ಎರಡು ದಿನ ಸರಿಯಾಗಿಯೇ ಇದ್ದೆ. ಮೂರನೇ ದಿನದಿಂದ ತಲೆ ಸುತ್ತುವುದು ಹೆಚ್ಚಾಯಿತು. ಆಟದ ಕಡೆ ಗಮನ ಕೊಡಲು ಆಗಲಿಲ್ಲ. ಕಣ್ಣು ಕೋರೈಸುವ ಬೆಳಕು ಮತ್ತಷ್ಟು ತೊಂದರೆಗೆ ಒಡ್ಡಿತು. ನಾಮಿನೇಟ್ ಮಾಡುವಾಗ ಕೂಡ ಹೆಚ್ಚಿನ ಜನ ನನ್ನ ಹೆಸರು ತೆಗೆದುಕೊಂಡರು. ಸಮರ್ಥರ ಗುಂಪಿನಿಂದ ಅಸಮರ್ಥರ ಗುಂಪಿಗೆ ಕಳುಹಿಸುವ ಸಂದರ್ಭದಲ್ಲಿ ಕೂಡ ಬಹುಬೇಗ ನನ್ನ ಹೆಸರನ್ನು ನಿರ್ಣಯಿಸಿದರು. ಅದು ಕೂಡ ಹಿನ್ನಡೆಗೆ ಕಾರಣ ಆಯಿತು. ಮನೆಯಲ್ಲಿ ಹಿರೀಕನಾಗಿದ್ದೆ. ಅಲ್ಲಿ ಸಣ್ಣಪುಟ್ಟ ಸಂಘರ್ಷಗಳು ಇದ್ದವು. ಅಷ್ಟರಲ್ಲಾಗಲೇ ಗುಂಪುಗಾರಿಕೆ, ಗುಸುಗುಸು ಆರಂಭ ಆಗಿತ್ತು. ಕೋಪ ಸಹಜವಾಗಿ ಬರ್ತಿತ್ತು. ಹಾಗೆಯೇ ಅದರ ಬಿಸಿ ಆರಿ ಹೋಗುತ್ತಿತ್ತು. ಒಂದು ರೀತಿಯಲ್ಲಿ ಚೆನ್ನಾಗಿತ್ತು. ಯಾರಾದರೂ ಒಬ್ಬರು ಹೊರ ಬರಲೇಬೇಕಿತ್ತು. ನನ್ನ ಅದೃಷ್ಟ ಕೈಕೊಡ್ತು ಅನ್ನಿಸುತ್ತೆ ಒಂದೇ ವಾರಕ್ಕೆ ಹೊರಬಂದೆ. ಸುದೀಪ್ ಒಳ್ಳೆಯ ಹಿತನುಡಿಗಳನ್ನು ಹೇಳಿ ಕಳಿಸಿದ್ದಾರೆ.

◆ **ಆಯ್ಕೆಯ ಪ್ರಕ್ರಿಯೆ ಹೇಗಿತ್ತು?**

ಆಹ್ವಾನಿಸಿ ನನಗೊಂದು ಫೋನ್ ಬಂತು. ಆಗ ಬಿಗ್‌ಬಾಸ್ ಸ್ಪರ್ಧಿಯಾಗಬೇಕು ಎಂದು ಕೇಳಿದರು. ಆಗ ನನ್ನ ಸಮಸ್ಯೆಯನ್ನು ಹೇಳಿಕೊಂಡೆ. ಸಾಕಷ್ಟು ಪ್ರಾಣಿಗಳನ್ನು ಸಾಕಿದ್ದೇನೆ. ಅವುಗಳ ಪಾಲನೆ ನನ್ನ ಹೊಣೆಗಾರಿಕೆ. ಅವುಗಳ ಮುತುವರ್ಜಿಯನ್ನು ಬೇರೆ ಯಾರೇ ತೆಗೆದುಕೊಂಡರೂ ನನಗೆ ಸಮಾಧಾನ ಅನ್ನಿಸುವುದಿಲ್ಲ ಎನ್ನುವುದನ್ನು ತಿಳಿಸಿದೆ. ಆದರೆ ಅದೃಷ್ಟ ನನ್ನನ್ನು ಹುಡುಕಿಕೊಂಡು ಬಂದಿದೆ ಎಂದು ಒಪ್ಪಿಕೊಂಡೆ. ಒಳಗಡೆ ಹೋಗುವ ಮೊದಲು ಯಾರು ಯಾರು ಇದ್ದಾರೆ ಎನ್ನುವುದು ಗೊತ್ತಿರಲಿಲ್ಲ. ಮೊದಲ ದಿನ ಹೋದಾಗ ಕೆಲವರು ಪರಿಚಯಸ್ಥರು ಇದ್ದಿದ್ದು ಗೊತ್ತಾಯಿತು. ಒಟ್ಟಾರೆ ಆಯ್ಕೆಯ ಪ್ರಕ್ರಿಯೆ ಕುತೂಹಲದಿಂದ ಕೂಡಿತ್ತು.

◆ **ಪ್ರಾಣಿ ಕರುಣೆಗೆ ಕಾರಣ, ಅದಕ್ಕಾಗಿ ಎಂತೆಂಥ ಕಷ್ಟಗಳು ಎದುರಾದವು?**

ಪ್ರಾಥಮಿಕ ಶಾಲೆಗೆ ಹೋಗುತ್ತಿದ್ದ ಕಾಲದಲ್ಲೇ ನನ್ನ ಊಟದ ಡಬ್ಬಿಯ ಊಟವನ್ನು ನಾಯಿಗೆ ಹಾಕುತ್ತಿದ್ದೆ. ಬಸ್‌ನಿಲ್ದಾಣದ ತನಕ ನನ್ನನ್ನು ಕಳುಹಿಸಲು ನಾಯಿಗಳು ಬರ್ತಿದ್ದವು. ಆಗ ನನಗೆ ನಾಯಿ ಶ್ಯಾಮ ಎಂದೇ ಎಲ್ಲರೂ ರೇಗಿಸುತ್ತಿದ್ದರು. ಅಲ್ಲಿಂದ ಶುರುವಾಯಿತು ಪ್ರಾಣಿಸ್ನೇಹ. 1976ರಲ್ಲಿ ಇರಬಹುದು ನಮ್ಮ ಮನೆಯ ಎದುರಿನ ಮನೆಗೆ ಹಾವು ಬಂದಿತ್ತು. ಆ ಮನೆಯ ಹುಡುಗಿಯೊಬ್ಬಳು ಕೂಗಾಡಿ ಅಳುತ್ತಿದ್ದಳು. ಹೋಗಿ ನೋಡಿದೆ, ನಾಗರಹಾವು ಕಂಡಿತು. ಅದರ ಬಾಲವನ್ನು ಹಿಡಿದುಕೊಂಡು ಸ್ವಲ್ಪ ದೂರದಲ್ಲಿ ಅದನ್ನು ಬಿಟ್ಟು ಬಂದೆ. ಹೊಸ ಬಡಾವಣೆ ಆಗಿದ್ದರಿಂದ ಅಲ್ಲಿ ಆಗಾಗ ಹಾವುಗಳು ಕಾಣಿಸಿಕೊಳ್ಳುತ್ತಿದ್ದವು. ಎಲ್ಲೇ ಇದ್ದರೂ ಹಿಡಿಯಲು ನನ್ನನ್ನು ಕರೆಯುತ್ತಿದ್ದರು. ಅಪ್ಪ–ಅಮ್ಮ ಬೈಯುತ್ತಿದ್ದರು. ಅವರಿಗೆ ಗೊತ್ತಾಗದಂತೆ ನನ್ನ ಕೆಲಸ ಮಾಡುತ್ತಿದ್ದೆ. ನನ್ನ ತಾತ ಸತ್ಯನಾರಾಯಣ ಶಾಸ್ತ್ರಿ, ಚಂದ್ರಮೌಳೇಶ್ವರ ದೇವಸ್ಥಾನದಲ್ಲಿ ಪೂಜೆ ಮಾಡುತ್ತಿದ್ದರು. ಅವರು ಶಿವನ ಹಾವು ಹಿಡಿಯುತ್ತೀಯಾ ಎಂದು ಬೈಯುತ್ತಿದ್ದರು. ಅವರ ಜೊತೆ ಅಜ್ಜಿಯೂ ರಾಗ ಹಾಡುತ್ತಿದ್ದರು. ನನ್ನ ಕೆಲಸವನ್ನು ಮಾತ್ರ ನಿಲ್ಲಿಸಲಿಲ್ಲ.

◆ **ಆಟೊ ನಿಮ್ಮ ಸಾಥಿ ಆಗಿದ್ದು ಹೇಗೆ?**

ಎಸ್‌ಎಸ್‌ಎಲ್‌ಸಿ ಎರಡು ಬಾರಿ ಫೇಲ್ ಆಗಿ ಪಾಸ್ ಆದೆ. ನಂತರ ಪಿಯುಸಿ ಅರ್ಧಕ್ಕೆ ಬಿಟ್ಟು ಐಟಿಐಗೆ ಸೇರಿದೆ. ಹಲವು ಫ್ಯಾಕ್ಟರಿಗಳಲ್ಲಿ ಕೆಲಸಕ್ಕೆ ಸೇರಿದೆ. ಆಗಲೂ ಹಾವು ಹಿಡಿಯುತ್ತಿದ್ದೆ. ಅನೇಕ ಫ್ಯಾಕ್ಟರಿಗಳಲ್ಲಿ ಬೆಸ್ಟ್ ವರ್ಕರ್ ಅವಾರ್ಡ್ ಪಡೆದುಕೊಂಡೆ. ಸಂಬಳ ಮಾತ್ರ ತೀರಾ ಕಡಿಮೆ ಅನಿಸಿತು. ನಮ್ಮ ಮನೆ ಸಮೀಪದಲ್ಲಿ ಫೈನಾನ್ಸ್ ಕಾರ್ಪೊರೇಷನ್‌ನಲ್ಲಿ ಕೆಲಸ ಮಾಡುವ ಒಬ್ಬರ ಪರಿಚಯ ಆಯಿತು. ಅವರು ತಮ್ಮ ಇಲಾಖೆಯಿಂದ ಸಾಲ ಸೌಲಭ್ಯ ಕೊಡಿಸುವ ಭರವಸೆ ಕೊಟ್ಟರು. ಸಣ್ಣ ಕೈಗಾರಿಕೆ ಮಾಡುವ ಧೈರ್ಯ ಸಾಲದೆ, ಆಟೊ ತೆಗೆದುಕೊಂಡೆ. ಅದೇ ನನ್ನ ಎರಡನೇ ತಾಯಿ ಎಂದು ಭಾವಿಸಿ ಪ್ರಾಮಾಣಿಕವಾಗಿ ಕೆಲಸ ಮಾಡಿದೆ. ಅದು ಅನ್ನ ಕೊಟ್ಟಿದೆ, ಹಾವು ಹೆಸರು ಕೊಟ್ಟಿದೆ. ನಮ್ಮ ತಾಯಿ ಮತ್ತು ತಂದೆ ಇಬ್ಬರೂ ಶಿಕ್ಷಕರು. ಅವರಿಗೆ ನಾನು ಆಟೊ ಓಡಿಸುವುದು ಇಷ್ಟ ಇರಲಿಲ್ಲ. ಅವರಿಗೆ ಪ್ರತಿಷ್ಠೆಯ ವಿಷಯ ಕೂಡ ಆಗಿತ್ತು. ಇರುವ ಒಬ್ಬ ಮಗ ಈ ಕೆಲಸ ಮಾಡುವುದೇ ಎನ್ನುತ್ತಿದ್ದರು. ನನ್ನ ಹಟಕ್ಕೆ ಮನಸೋತ ಅಮ್ಮ ನನ್ನ ಸಾಲಕ್ಕೆ ಜಾಮೀನು ನೀಡಿದ್ದರು.

■ **ರಾಘವೇಂದ್ರ ಕೆ.**